# ಈಶ್ವರ ಅಲ್ಲಾ ಭೇದ ಇಲ್ಲಾ

ಧರ್ಮ ಸಮನ್ವಯ ನಮ್ಮ ಬಹುದೊಡ್ಡ ಸಾಧನೆ. ಧಾರ್ಮಿಕ ಸಹಿಷ್ಣುತೆಯೂ ನಮ್ಮವರ ಬಾಳನ್ನು ಸಮೃದ್ಧವಷ್ಟೇ ಅಲ್ಲ, ಅರ್ಥಪೂರ್ಣಗೊಳಿಸಿದೆ. ದಾರ್ಶನಿಕ ಆದಾನ ಪ್ರದಾನಗಳು ನಿತ್ಯ ನಿರಂತರವಾಗಿವೆ. ಮನುಷ್ಯರು ನಿಂತ ನೀರಲ್ಲ. ಹರಿಯುವ ಪ್ರವಾಹ. ನಿಂತ ನೀರು ಕೊಳೆಯುತ್ತದೆ. ಪ್ರವಾಹ ನಿತ್ಯ ನೂತನವಾಗುತ್ತಲೆ ಸದಾ ಚೈತನ್ಯಶೀಲವಾಗಿ ಹೊಸ ಹೊಸದನ್ನು ಬಾಚಿಕೊಳ್ಳುತ್ತ ಧುಮ್ಮಿಕ್ಕುತ್ತದೆ. ಅಂತೆಯೇ ಧಾರ್ಮಿಕ ಸಾಮರಸ್ಯವೂ ಗತಿಶೀಲ ಸಮಾಜಕ್ಕೆ ಆಕ್ಸಿಜನ್ನಿನಂತೆ ಕೆಲಸ ಮಾಡುತ್ತದೆ. ಯಾವುದೇ ದಾರ್ಶನಿಕ ಕಾಣ್ಕೆಯು ತನ್ನ ಪರಿಸರದ ಇತರ ಅನ್ವೇಷಣೆಗಳೊಂದಿಗೆ ನಿಕಷಕ್ಕೆ ಒಡ್ಡಿಕೊಳ್ಳುತ್ತಲೆ ತನ್ನ ಧಾರಣಶಕ್ತಿಯನ್ನು ಉತ್ಕೃಷ್ಟಗೊಳಿಸಿಕೊಳ್ಳುತ್ತದೆ. ಕನ್ನಡ ನಾಡಿನ ಸಂಸ್ಕೃತಿಯ ವೈಶಿಷ್ಟ್ಯವಿರುವುದೇ ಈ ಸಮನ್ವಯತೆಯಲ್ಲಿ. ಧಾರ್ಮಿಕ ಆಚರಣೆ, ನಂಬಿಕೆ, ತತ್ವಗಳಲ್ಲಿ ಮಾತ್ರವಲ್ಲದೆ ಆಚಾರ, ವಿಚಾರ, ಉಡುಗೆ, ತೊಡುಗೆ, ಕಲೆ ಅಷ್ಟೆ ಏಕೆ ಭಾಷೆಯಲ್ಲಿಯೂ ಸಾಮರಸ್ಯವನ್ನು ನಮ್ಮವರು ಸಾಧಿಸಿದ್ದಾರೆ. ಕನ್ನಡ ನುಡಿ ಬೆಡಗು ತನ್ನ ಪರಿಸರದ ಭಾಷೆಗಳೊಂದಿಗೆ ಸಮನ್ವಯಗೊಳ್ಳುತ್ತಲೆ ತನ್ನತನವನ್ನು ಗಟ್ಟಿಗೊಳಿಸಿಕೊಂಡಿದೆ. ಗಡಿನಾಡಿನ ಮರಾಠಿ, ತೆಲುಗು, ತಮಿಳು ಭಾಷೆಗಳೊಂದಿಗೆಯಂತೂ ಸರಿಯೇ ಸರಿ. ರಾಜಕೀಯ ಕಾರಣಕ್ಕಾಗಿ ನುಸುಳಿಕೊಂಡಿದ್ದ ಉರ್ದು, ಹಿಂದಿಯಂಥ ಭಾಷೆಯೊಳಗೊಂಡಂತೆ ಹೊರಗಿನಿಂದ ಬಂದ ಇಂಗ್ಲಿಷ್‌ನಂಥ ಭಾಷೆಗಳೊಂದಿಗೂ ಕೊಡುಕೊಳ್ಳುವಿಕೆಯನ್ನು ನಡೆಸಿದೆ.

ಆಳರಸರು ಭಾಷೆಯನ್ನು ಅಸ್ತ್ರವಾಗಿಸಿಕೊಂಡು ಇತರ ಭಾಷಿಕರ ಮೇಲೆ ಹೇರಿಕೆ ಮಾಡುತ್ತಲೆ ಬಂದಿರುವರಷ್ಟೇ. ಆದರೆ ಜನಪದರು ಮಾತ್ರ ಹೇರಿಕೆಗೆ ಬಾಗದೆ, ಅನ್ಯಭಾಷೆ ಬಳಸಿಕೊಂಡು ಭಾಷಾ ಸೌಷ್ಟವಕ್ಕೆ ಇಂಬಾಗಿ ನಿಂತಿದ್ದಾರೆ. ಭಾಷಾ ಹೇರಿಕೆಯ ರಾಜಕಾರಣವೂ ಪರಾಕಾಷ್ಠೆಗೆ ತಲುಪಿದ ಈ ಸಂದರ್ಭದಲ್ಲಿ ನಮ್ಮ ಪೂರ್ವಿಕರು ಅಂಥ ದಬ್ಬಾಳಿಕೆಗಳನ್ನು ಎದುರಿಸಿಯೂ ತಮ್ಮತನವನ್ನು ನಿಚ್ಚಳಗೊಳಿಸಿಕೊಂಡು ಬಂದಿದ್ದರು ಎಂಬುದು ತೀರ ಕುತೂಹಲ ಮೂಡಿಸುತ್ತದೆ. ಈ ದಿಸೆಯಲ್ಲಿ ಕನ್ನಡ ತತ್ವಪದಕಾರರು ಗಮನ ಸೆಳೆಯುತ್ತಾರೆ. ಜಾತಿ, ಮತ, ಪಂಥ, ವರ್ಗ, ವರ್ಣ, ಲಿಂಗ ತಾರತಮ್ಯಗಳನ್ನು ಮೀರಿದ ಅವರು ಸೀಮಾತೀತ ಬಯಲು ಗಳಿಕೆಯ ಸಾಧಕರಾಗಿದ್ದರು. ಅಂತೆಯೇ ಭಾಷಾ ಮಡಿವಂತಿಕೆಯಿಂದ ದೂರವಿದ್ದರು. ಕೈವಾರ ನಾರೇಯಣಪ್ಪ ತಾತನಿಗೆ ಕನ್ನಡ ತೆಲುಗುಗಳಲ್ಲಿ ವ್ಯತ್ಯಾಸವೇ ಕಂಡಿಲ್ಲ. ಕೂಡಲೂರ ಬಸಲಿಂಗಪ್ಪ, ಕಡಕೋಳ ಮಡಿವಾಳಪ್ಪ, ಚೆನ್ನೂರಿನ ಜಲಾಲಸಾಹೇಬ, ಮೋಟ್ನಳ್ಳಿ ಹಸನ್ ಸಾಹೇಬ ಹೀಗೆ ಈ ಪಟ್ಟಿ ದೀರ್ಘವಾಗುತ್ತದೆ. ಇವರೆಲ್ಲ ತಮ್ಮ ಪದರಿಗೆ ಬಂದ ಉರ್ದು, ತೆಲುಗು, ಮರಾಠಿ ಭಾಷೆಗಳನ್ನು ದುಡಿಸಿಕೊಂಡೂ ಕಳೆದು ಹೋಗದೆ ತೋರಿದ ಸಂಯಮ ಉಪಮಾತೀತವಾಗಿದೆ. ಅನ್ಯ ಭಾಷಿಕ ಶಬ್ದಗಳನ್ನು ಎರವಲು ಪಡೆಯುವುದು ಸರ್ವೇ ಸಾಮಾನ್ಯ. ಆದರೆ ಇಡೀ ವಾಕ್ಯ, ಗಾದೆ, ನಾಣ್ಣುಡಿಗಳನ್ನು ಕನ್ನಡಕ್ಕೆ ಒಗ್ಗಿಸಿ ಬಗ್ಗಿಸಿಕೊಂಡು ಬಗೆದ ಶೈಲಿ ಅಭೂತಪೂರ್ವ ಭಾಷಾ ಬಾಂಧವ್ಯವನ್ನು ಸಾಕ್ಷೀಕರಿಸುತ್ತದೆ. ಜಲಾಲಸಾಹೇಬರ ಒಂದು ಪದವನ್ನು ಗಮನಿಸಬಹುದು.

ಸಬ್ ಕೆಹತೆ ಹೈ ಈಶ್ವರ ಅಲ್ಲಾ  
ಇದರ ಭೇದ ಯಾರಿಗೂ ತಿಳಿದಿಲ್ಲ||  
ನಿರಾಕಾರಸೇ ಆಕಾರ ಹುವೇ ವೇದ ಶಾಸ್ತ್ರಕೆ ನಿಲುಕಿಲ್ಲ  
ಹಿಂದೂ ಮುಸ್ಲಮಾನ ಶಾಸ್ತ್ರ ಪಡತೆ ಹೈ| ಗುರುಮನಿ ಕೀಲ ಸಿಗಲಿಲ್ಲ|  
ಲಾಯಕ್ ಗುರುಕೋ ಜಬ್ ಢೂಂಢ ಲಾಕೇ |ಏನು ಬೇಡಿದ್ದು ಕೊಡಬೇಕಲ್ಲ  
ತನುಮನಧನ ಸಬ್ ಲೋಭ್ ಛೋಡಕರ್ ಆಗಬೇಕು ಗುರುವಿನ ಚೇಲಾ||

ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಹಳ್ಳಿ ಚೆನ್ನೂರು. ಅಲ್ಲಿನ ಸೂಫಿ ಸಂತ ಜಲಾಲಸಾಹೇಬ. ಈತ ಬದುಕಿನುದ್ದಕ್ಕೂ ಶರಣ ಮತ್ತು ಸೂಫಿ ತತ್ವಗಳನ್ನು ಸಮನ್ವಯಗೊಳಿಸಿಕೊಂಡಿದ್ದನು. ಕೂಡಲೂರು ಬಸಲಿಂಗಪ್ಪನಿಂದ ಗುರುದೀಕ್ಷೆ ಪಡೆದುಕೊಂಡರೆ; ಕಡಕೋಳ ಮಡಿವಾಳಪ್ಪನಿಂದ ಕಾವ್ಯ ದೀಕ್ಷೆ ಪಡೆದುಕೊಂಡು ಮಡಿವಾಳಪ್ಪನ ಅಂಕಿತದಿಂದಲೆ ತತ್ವಪದಗಳನ್ನು ಬರೆದವನು. ಈಶ್ವರ ಮತ್ತು ಅಲ್ಲಾ ಅಭೇದ್ಯ ತತ್ವ. ನಿರಾಕಾರದಿಂದಲೇ ಆಕಾರವಾದರೂ ಆಕಾರಕ್ಕಾಗಿ ಬಡಿದಾಡಿ ಸತ್ತವರಿಗಾಗಿ ಮರುಗುತ್ತಾನೆ ಜಲಾಲ. ಹಿಂದೂ, ಮುಸ್ಲಿಂ ಯಾವುದೇ ಮತದಲ್ಲಿ ಜನಿಸಿರಲಿ ಗುರುಮಕ್ಕಳಾಗದ ಹೊರತು ಪರದ ಸಾಧನೆ ಸಿದ್ಧಿಸದು. ಸಮರ್ಥ ಗುರುವನ್ನು ಹುಡುಕಿಕೊಳ್ಳಬೇಕು... ಇಂಥ ಗುರು ಸಿಕ್ಕರೆ ಆತನಿಗೆ ಸರ್ವವೂ ಸಮರ್ಪಿಸಬೇಕು ಗುರುವಿನ ಚೇಲಾ ಆಗುವುದು ಎಂದರೆ ಗುರುವಿನ ಗುಲಾಮನಲ್ಲ. ಶರಣ ಪರಂಪರೆಯಲ್ಲಿ ಗುರುವು ಮುಟ್ಟಿ ಗುರುವೇ ಆಗಬೇಕು. ಶಿವಾದ್ವೈತದಲ್ಲಿ ಶ್ರೇಣಿಗಳಿಲ್ಲ. ಸಾಧನಾ ಸ್ಥಲಗಳಿವೆ. ಅಂದರೆ ಹಂತ ಹಂತವಾಗಿ ಏರುತ್ತಲೆ ಹೋಗುವುದು. ಏರುವುದು ಎಲ್ಲರಿಗೂ ಸಾಧ್ಯ. ಸಾಧನೆಯೇ ಇಲ್ಲಿನ ಆತ್ಯಂತಿಕ ತತ್ವ. ಹೀಗಾಗಿ ಸಾಧಕರು ತೋರಿಕೆಯ ಆಚರಣೆಗಳಲ್ಲಿ ಸಿಲುಕುವುದಿಲ್ಲ. ಗುರು ಮಡಿವಾಳನಲ್ಲಿ ಶಿಷ್ಯತ್ವ ಹೊಂದಬೇಕಾದರೆ ಅಂತರಂಗದ ಮೈಲಾ (ಹೊಲಸು) ತೊಳಿಬೇಕು. ಒಳಹೊರಗು ಏಕವಾಗುವುದೇ ಸೂಫಿ ಮಾರ್ಗ ಇದುವೇ ಶರಣ ಮಾರ್ಗ ಶರಣ, ಸೂಫಿಗಳಲ್ಲಿ ಇಲ್ಲದ ಭೇದ ಕನ್ನಡ ಉರ್ದುವಿನಲ್ಲಾದರೂ ಇರಲಾದೀತೆ. ಉಭಯ ಭಾಷೆಗಳು ಪರಸ್ಪರ ಘಾತಕವಾಗದೆ ಅನ್ಯೋನ್ಯವಾಗಿ ಮೇಳೈಸಿವೆ. ಆಶ್ಚರ್ಯವೆಂದರೆ ಉರ್ದು ಭಾಷೆ ಬರದವರಿಗೂ ಅದರ ಲಯ ಮತ್ತು ಕ್ರಮಾನ್ವಯತೆಯಿಂದಾಗಿ ಪದದ ಭಾವ ಥಟ್ಟನೆ ಜ್ಞಾತವಾಗುತ್ತದೆ. ಉಭಯ ಭಾಷಿಕರಿಗೂ ಆಪ್ಯಾಯಮಾನವಾಗುವ ಈ ಪದವನ್ನು ಭಜನೆ ಮೇಳಗಳ ಕವ್ವಾಲಿ ಶೈಲಿಯಲ್ಲಿ ಹಾಡುವುದನ್ನು ಕೇಳಿಯೇ ಆನಂದಿಸಬೇಕು. ಇವು ಓದಿಗೆ ಬಿಟ್ಟುಕೊಡದ ಅರ್ಥ ಪರಂಪರೆ, ಭಾವಲಬ್ಧಿಯನ್ನು ಗೇಯಕ್ಕೆ, ನಾದ ಲಹರಿಗೆ ಸಲೀಸಾಗಿ ಬಿಟ್ಟುಕೊಡುತ್ತವೆ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ.  
  —ಕುವೆಂಪು
- ಭೂಮಿಯು ಸುಂದರವಾದ ವಧುವಿನಂತೆ, ಅವಳ ಸೌಂದರ್ಯವನ್ನು ಹೆಚ್ಚಿಸಲು ಯಾವುದೇ ಮಾನವ ನಿರ್ಮಿತ ಆಭರಣಗಳ ಅಗತ್ಯವಿಲ್ಲ.  
  —ಖಲೀಲ್ ಗಿಬ್ರಾನ್
- ಅಹಂಕಾರಿ ಮನುಷ್ಯ ಒಂಟಿಯಾಗಿಯೇ ಇರಬೇಕಾಗುತ್ತದೆ.  
  —ಚೆನ್ನವೀರ ಕಣವಿ
- ನಮ್ಮ ಸರ್ಕಾರ, ನಮ್ಮ ಯೋಜನಾ ತಜ್ಞರು, ವಿಜ್ಞಾನಿಗಳು ಎಲ್ಲರ ಧೋರಣೆಯೂ ಕೃಷಿಯನ್ನು ಕೇವಲ ಉತ್ಪಾದನ ವಿಧಾನವೆಂದೇ ಪರಿಗಣಿಸುತ್ತದೆ. ರೈತ ಅವರ ದೃಷ್ಟಿಯಲ್ಲಿ ಬೋನಿನಲ್ಲಿ ಬೆಳೆಯುವ ಬ್ರಾಯ್ಲರ್ ಕೋಳಿಯಂತೆ ಕೇವಲ ಉತ್ಪಾದಕ.  
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ಜೀವನದಿಂದಲೇ ದೇವರು ಉದ್ಭವಿಸಬೇಕು, ಬೆಳೆಯಬೇಕು. ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ ಅಷ್ಟು ಅಷ್ಟು ದೇವರೂ ಹಿರಿದು.  
  —ಶಿವರಾಮ ಕಾರಂತ
- ಮಹಾಕಾರ್ಯಗಳನ್ನು ಮಹಾತ್ಯಾಗದಿಂದ ಮಾತ್ರ ಸಾಧಿಸಲು ಸಾಧ್ಯ. ಅನ್ಯಾಯದ ಸ್ಥಾನವು ಅಭದ್ರವಾದುದು. ಅದರಿಂದ ಏಳಿಗೆ ಆಗದು.  
  —ಸ್ವಾಮಿ ವಿವೇಕಾನಂದ
- ಶಕ್ತಿ, ದೈಹಿಕ ಬಲದಿಂದ ಬರುವುದಿಲ್ಲ. ಅದು ಬರುವುದು ಅದಮ್ಯವಾದ ಇಚ್ಛಾಶಕ್ತಿಯಿಂದ.  
  —ಮಹಾತ್ಮ ಗಾಂಧಿ
- ಸಂಸ್ಕೃತಿಯ ಮಹೋನ್ನತವಾದ ಮಹಲಿಗೆ ನೀತಿ ನೆಲಗಟ್ಟು, ಅನುಭವ ಆಧಾರ.  
  —ಕೆ.ಎಸ್. ನಿಸಾರ್ ಅಹಮದ್
- ಒಬ್ಬ ಶಿಕ್ಷಕ ತಾನು ಕಲಿಯದೆ ಇನ್ನೊಬ್ಬರಿಗೆ ಕಲಿಸಲಾರ. ತಾನು ಉರಿಯದ ದೀಪ ಇನ್ನೊಂದು ದೀಪವನ್ನು ಬೆಳಗಿಸಲಾರದು.  
  —ರವೀಂದ್ರನಾಥ್ ಟ್ಯಾಗೋರ್